*

**ಓಎಸ್ ನಂಃ 67/2015**
**ಡಿಡಬ್ಲೂಃ 1**

**ಸಾಕ್ಷಿಗೆ ದಿನಾಂಕ 04-04-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಎನ್.ಜೆ. ವಕೀಲರಿಂದ

ನನಗೆ ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿದ್ದಾರೆಂದು ಗೊತ್ತಿದೆ. ನೀವು ಈ ದಾವೆಯಲ್ಲಿ ಕಕ್ಷಿದಾರರು ಅಲ್ಲ ಎಂದರೆ ಸಾಕ್ಷಿ ನಾನು ಪ್ರತಿವಾದಿ ಕಂಪನಿಯ ಅಥೊರೈಸ್ಡ್ ಪರ್ಸನ್ ಎಂದು ಹೇಳುತ್ತಾರೆ. ನಾನು ಈ ದಾವೆಯಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ನೋಡಿಕೊಂಡಿರುತ್ತೇನೆ. ನಾನು 2024 ರಿಂದ ಪ್ರತಿವಾದಿ ಕಂಪನಿಯಲ್ಲಿ Assistant Manager Laisioning ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನೀವು ಪ್ರತಿವಾದಿ ಪರ ಸಲ್ಲಿಸಿದ ತಕರಾರನ್ನು ತಯಾರಿಸಲು ಮಾಹಿತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನಾನು 2024ರಲ್ಲಿ ಕಂಪನಿಯನ್ನು ಸೇರಿದ್ದು ಮೊದಲಿನ General Manager ಮಾಹಿತಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನೀವು ಸಲ್ಲಿಸಿರುವ ವಕಾಲತ್ ನಲ್ಲಿ ನೀವು ಪ್ರತಿವಾದಿ ಕಂಪನಿಯ Assistant Manager Laisioning ಎಂದು ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ನೀವು ಪ್ರತಿವಾದಿ ಕಂಪನಿಯ Assistant Manager Laisioning ಎಂದು ಹೇಳಿ ನಿಮಗೆ ನೀಡಿದ ಅಧಿಕಾರ ಪತ್ರದ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆಂದು ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇನೆಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಆಕೆಯ ಪ್ರಮಾಣ ಪತ್ರವನ್ನು ತೋರಿಸಿ ನೀವು ಹೇಳಿದಂತೆ ನಮೂದು ಇದೆಯಾ ಎಂದು ಕೇಳಿದಾಗ ಸಾಕ್ಷಿ ನಮೂದು ಇಲ್ಲ ಎಂದು ನುಡಿಯುತ್ತಾರೆ. ನಿಡಿ-4 authorisation ಪತ್ರದಲ್ಲಿ ಯಾವ ನ್ಯಾಯಾಲಯದಲ್ಲಿ ದಾವೆ ಇದೆ ಮತ್ತು ಯಾವ ಪ್ರಕರಣದಲ್ಲಿ ನಿಮಗೆ authorisation ನೀಡಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ಈ ದಾವೆಯ ನಮೂದು ನಿಡಿ-4ರಲ್ಲಿಲ್ಲ ಎಂದರೆ ಸರಿ. ನಿಡಿ-4ನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಮೊದಲು ನಾನು ಅದನ್ನು ಓದಿಕೊಂಡಿರುತ್ತೇನೆ. ನಾನು ಮೂಲ ದಾವೆ ಸಂಖ್ಯೆ 228/2011ರ ಕಡತವನ್ನು ನೋಡಿಕೊಂಡಿಲ್ಲ. ನೀವು ಮೂಲ ದಾವೆ ಸಂಖ್ಯೆ 228/2011ರ ಕಡತವನ್ನು ನೋಡದೆಯೇ ನಿಮ್ಮ ಪ್ರಮಾಣ ಪತ್ರದಲ್ಲಿ ಅದರ ಡಿಕ್ರಿಯನ್ನು ನಕಾರಿಸಿದ್ದೀರಿ ಎಂದರೆ ಸರಿ.

ನನಗೆ ವಾದಿಯ ಮಲತಾಯಿ ಮತ್ತು ಮಲ ಸಹೋದರನ ಮಾಹಿತಿ ಇಲ್ಲ. ನಾನು ಅವರ ಹೆಸರುಗಳನ್ನು ನನ್ನ ಪ್ರಮಾಣಪತ್ರದಲ್ಲಿ ನಮೂದು ಮಾಡಿರುತ್ತೇನೆ. ಪ್ರತಿವಾದಿ ಕಂಪನಿಯು ತಮ್ಮ Factory ಯನ್ನು ಪ್ರಾರಂಭಿಸಲು ಚಿತ್ತಾಪುರ ತಾಲೂಕಿನಲ್ಲಿ ಹಲವಾರು ಜಮೀನುಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸುಮಾರು 2000 ಎಕ್ರೆ ಜಮೀನನ್ನು ಪ್ರತಿವಾದಿ ಕಂಪನಿ ಈವರೆಗೆ ನೋಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯು ಸರ್ವೆ ನಂಬರ್ 100ಕ್ಕೆ ಸಂಬಂಧಪಟ್ಟಿರುತ್ತದೆ. ನಾನು ಈ ದಾವೆಯ ಬಗ್ಗೆ ಅದರ ಕಡತವನ್ನು ಓದಿಕೊಂಡಿರುತ್ತೇನೆ.

ಈ ದಾವೆಯಲ್ಲಿ ಮಾನ್ಯ ನ್ಯಾಯಾಲಯವು ಪ್ರತಿವಾದಿ ಕಂಪನಿಯವರು ಯಾವುದೇ ಕಟ್ಟಡವನ್ನು ಅಥವಾ compound ಗೋಡೆಯನ್ನು ಕಟ್ಟಬಾರದು ಎಂದು ಆದೇಶ ಆಗಿತ್ತು ಮತ್ತು ಸದರಿ ಆದೇಶವು MA No.15/2019ನಲ್ಲಿ ಎತ್ತಿ ಹಿಡಿಯಲಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ನಾವು ಆದೇಶ ಆದ ನಂತರ ಯಾವುದೇ ಕಟ್ಟಡವನ್ನು ಅಥವಾ ಗೋಡೆಯನ್ನು ಕಟ್ಟಿಲ್ಲ ಎಂದು ನುಡಿಯುತ್ತಾರೆ. ಸದರಿ MA No.15/2019ನ ಆದೇಶದ ವಿರುದ್ಧ ಯಾವುದೇ ಮೇಲ್ಮನವಿಯನ್ನು ಸಲ್ಲಿಸಲಾಗಿಲ್ಲ. ನಿಮ್ಮ ಕಂಪನಿಗೆ ಈ ಮೊದಲು ಬಿ.ಆರ್. ಕಾಂತಾ ವಕೀಲರು Legal adviser ಆಗಿದ್ದರು ಎಂದರೆ ಸರಿ.

ಮೂಲ ದಾವೆ ಸಂಖ್ಯೆ 228/2011 ನೇದ್ದರಲ್ಲಿ ಬಿ.ಆರ್. ಕಾಂತಾ ವಕೀಲರು ರಾಜಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ವಕೀಲರು ಈ ದಾವೆಯನ್ನು ಸಲ್ಲಿಸಿದ ನಂತರ ಮೂಲ ದಾವೆ ಸಂಖ್ಯೆ 228/2011 ನೇದ್ದರ Compromise ಆದೇಶದ ಬಗ್ಗೆ ಹೇಳಿದ್ದರಾ ಎಂದರೆ ಸಾಕ್ಷಿ ಹೇಳಿಲ್ಲ ಎಂದು ನುಡಿಯುತ್ತಾರೆ. 2013-14ರ ಪಹಣಿ ಪತ್ರಿಕೆಯಲ್ಲಿ ಮೂಲ ದಾವೆ ಸಂಖ್ಯೆ 228/2011 ನೇದ್ದರ Compromise ಆದೇಶದ ಪ್ರಕಾರ ವಾದಿಯ ಹೆಸರು ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ನಮೂದಾಗಿತ್ತು ಅದನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲ ಎಂದು ನುಡಿಯುತ್ತಾರೆ. ನಾನು 2016 ರಿಂದ ಮುಂದಿನ ದಾವಾ ಆಸ್ತಿಯ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ನಿಮಗೆ ಮೂಲ ದಾವೆ

ಸಂಖ್ಯೆ 228/2011ರ Compromise ಆದೇಶದ ಬಗ್ಗೆ ಗೊತ್ತಿದ್ದರೂ ಸಹ ಈಗ ಕೇವಲ 2016 ರಿಂದ ಮುಂದಿನ ಪಹಣಿ ಪತ್ರಿಕೆಯನ್ನು ನೋಡಿದ್ದೇನೆ ಎಂದು  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.  ಸಾಕ್ಷಿ ಮುಂದುವರಿದು ನಮ್ಮ ಕಂಪನಿಯು 2015ರಲ್ಲಿ ಪ್ರಾರಂಭ ಆದ ಕಾರಣ ಅದರ ಹಿಂದಿನ ಪಹಣಿ ಪತ್ರಿಕೆಗಳನ್ನು ನೋಡಿಲ್ಲ ಎಂದು ನುಡಿಯುತ್ತಾರೆ.  ನಮ್ಮ ಕಂಪನಿಯ ಹಿಂದಿನ authorised person 1982 ರಿಂದ ಅವರು ಇರುವವರೆಗೆ ದಾಖಲೆಗಳನ್ನು due deligence ಅಡಿಯಲ್ಲಿ ನೋಡಿರುತ್ತಾರೆ.

ಸಾಕ್ಷಿಗೆ ಈಗ ಒಂದು ಪಹಣಿ ಪತ್ರಿಕೆಯನ್ನು ತೋರಿಸಲಾಗಿ ಅದು ದಾವಾ ಆಸ್ತಿಯ 2013-14ರ ಪಹಣಿ ಪತ್ರಿಕೆಯಾಗಿದ್ದು ಅದರಲ್ಲಿ ಪ್ರತಿವಾದಿಯ ಹೆಸರು 01 ಎಕ್ರೆ ಜಾಗಕ್ಕೆ ಇದೆ ಎಂದರೆ ಸರಿ ಎಂದು ಹೇಳಿದ ಕಾರಣ ಸದರಿ ದಾಖಲೆಯನ್ನು ನಿಡಿ-6 ಎಂದು ಗುರುತಿಸಲಾಯಿತು.

ದಿಃ 05.05.2016ರಂದು ಜಿಲ್ಲಾಧಿಕಾರಿಗಳು ಕಲಬುರಗಿ ಇವರ ಆದೇಶದಂತೆ ತಹಶೀಲ್ದಾರ್ ಚಿತ್ತಾಪುರ್ ಇವರು 05 ಎಕ್ರೆ 05 ಗುಂಟೆ ಜಾಗವನ್ನು ಸರ್ವೆ ನಂಬರ್ 100/2ರಲ್ಲಿ ಲೀಸ್ ಡೀಡ್ ಅಡಿಯಲ್ಲಿ 30 ವರ್ಷಗಳ ಕಾಲಕ್ಕೆ ನೀಡಿರುತ್ತಾರೆ.  ಈ ದಾವೆಯನ್ನು ಸಲ್ಲಿಸಿದಾಗ ಲೀಸ್ ಡೀಡ್  ಇನ್ನೂ ಮಾಡಿರಲಿಲ್ಲ ಎಂದರೆ ಸರಿ.  ಸದರಿ ಲೀಸ್ ಡೀಡ್ ದಾವಾ ಆಸ್ತಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ.  ಈ ದಾವೆಯನ್ನು  ಸರ್ವೆ ನಂಬರ್ 100ರ ಸಲುವಾಗಿ ಸಲ್ಲಿಸಲಾಗಿದೆ.  ವಾದಿ ಬಡ ಕೂಲಿಯಾಗಿದ್ದು ಆಕೆಯ ಜಮೀನನ್ನು ಯಾವುದೇ ಪರಿಹಾರದಧನ ನೀಡದೆ ಅದನ್ನು ಕಬಳಿಸುವ ಉದ್ದೇಶದಿಂದ ಆಕೆಯ ಮೇಲೆ ಒತ್ತಡ ತಂದು ದಾವಾ ಆಸ್ತಿಯ ಕಬ್ಜೆಗೆ ತೊಂದರೆ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ.  ದಾವಾ ಆಸ್ತಿಯ ಚಕ್ ಬಂದಿ ಮತ್ತು ನಿಮ್ಮ ಲೀಸ್ ಡೀಡ್ ನಲ್ಲಿ ತೋರಿಸಿರುವ ಚಕ್ ಬಂದಿ ಬೇರೆಬೇರೆ ಆಗಿದೆ ಎಂದರೆ ಸಾಕ್ಷಿ ದಾವಾ ಆಸ್ತಿಯು ಸರ್ವೆ ನಂಬರ್ 100ರಲ್ಲಿಯ ಒಂದು ಭಾಗ ಆಗಿದ್ದು ಮತ್ತು ಲೀಸ್ ಡೀಡ್ ಸರ್ವೆ ನಂಬರ್ 100/2ಕ್ಕೆ ಸಂಬಂಧಪಟ್ಟ ಕಾರಣ  ಚಕ್ ಬಂದಿಗಳಲ್ಲಿ ವ್ಯತ್ಯಾಸ ಇದೆ ಎಂದು ನುಡಿಯುತ್ತಾರೆ.  ಮೂಲ ದಾವೆ ಸಂಖ್ಯೆ 228/2011ರ ಡಿಕ್ರಿಯನ್ನು nullify ಮಾಡಲು ಲೀಸ್ ಡೀಡನ್ನು ತಯಾರಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.  ನಿಮ್ಮ ಪ್ರಮಾಣ ಪತ್ರದ 7ನೇ ಕಂಡಿಕೆಯಲ್ಲಿ sancntion ಆದೇಶವನ್ನು ನಮೂದುದ ಮಾಡಿಲ್ಲ ಎಂದರೆ ಸರಿ.

ನಿಮಗೆ ಈ ದಾವೆಯ ಕುರಿತು ಮತ್ತು ಮೂಲ ದಾವೆ ಸಂಖ್ಯೆ 228/2011ರ ಕುರಿತು ಯಾವುದೇ ಮಾಹಿತಿ ಇಲ್ಲದೆ ಇಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಈ ದಾವೆಯಲ್ಲಿ ಪ್ರಮಾಣಪತ್ರ ಸಲ್ಲಿಸಿ ಸಾಕ್ಷ್ಯ ನುಡಿಯಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ನಿಡಿ-4 ಅಧಿಕಾರ ಪತ್ರದಲ್ಲಿ ನಿಮ್ಮ designation ನಮೂದು ಮಾಡಿಲ್ಲ ಎಂದರೆ ಸರಿ. ನನ್ನನ್ನು ಈಗ deputation ಮೇಲೆ ವಾಡಿ ACC company ಯಲ್ಲಿ Assistant Manager ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಮತ್ತು ನಾನು ವಾಡಿಯಲ್ಲಿ ಈಗ ವಾಸವಾಗಿರುತ್ತೇನೆ. ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಮೂಲ ದಾವೆ ಸಂಖ್ಯೆ 228/2011ರ ಆದೇಶದ ಪ್ರಕಾರ ಇಂದಿನವರೆಗೆ ವಾದಿ ದಾವಾ ಆಸ್ತಿಯ ಮಾಲಿಕಳು ಮತ್ತು ಕಬ್ಜೆ ಹೊಂದಿದ್ದಾಳೆ ಎಂದರೆ ಸರಿಯಲ್ಲ. ನಿಡಿ-3 ಸರ್ವೆ ನಂಬರ್ 100/2ಕ್ಕೆ ಸಂಬಂಧಪಟ್ಟಿದೆ ಎಂದರೆ ಸರಿ. ಸದರಿ ನಿಡಿ-3 ದಾವಾ ಆಸ್ತಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯ ಮಾಲಿಕತ್ವವನ್ನು ಮತ್ತು ವಾದಿಯ ದಾವಾ ಆಸ್ತಿಯ ಕಬ್ಜೆಯನ್ನು ಅಕ್ರಮವಾಗಿ ಪಡೆಯಲು ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.